## **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ**

## **SC No. 41/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಪೂವಯ್ಯ** | **PW - 1** |
| ತಂದೆಯ ಹೆಸರು | : | **ಪಳಂಗಪ್ಪ** | **CW - 1** |
| ವಯಸ್ಸು | : | **83 ವರ್ಷ** | |
| ವೃತ್ತಿ | : | **ವ್ಯವಸಾಯ** | |
| ವಾಸ | : | **ಪುಂದಚೇರಿ ಗ್ರಾಮ, ಮಡಿಕೇರಿ ತಾಲೂಕು** | |

**ಸಾಕ್ಷಿಯನ್ನು ದಿನಾಂಕ 10-01-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ-2 ಸೋಮಣ್ಣ ನನಗೆ ಮಗನಾಗಬೇಕು. ಚಾಸಾ-3 ಶ್ರೀಮತಿ ಮೀನಾಕ್ಷಿ ಮೃತ ನಂದೀಶನ ಹೆಂಡತಿ ಇರುತ್ತಾಳೆ. ಚಾಸಾ-4 ಶ್ರೀಮತಿ ಅಕ್ಕವ್ವ ನನಗೆ ಹೆಂಡತಿ ಆಗಬೇಕು. ನನಗೆ ಚಾಸಾ-5 ರಿಂದ ಚಾಸಾ-10 ರವರ ಪರಿಚಯ ಇರುತ್ತದೆ, ಅವರು ಸಂಬಂಧಿಕರು ಇರುತ್ತಾರೆ. ಮೃತ ನಂದೀಶ್ ನನಗೆ ಮಗನಾಗಬೇಕು. ಆರೋಪಿ ಉತ್ತಪ್ಪ ನನಗೆ ಮಗನಾಗಬೇಕು.

2. ನನ್ನ ಮಗ ನಂದೀಶ್ ಈತನು ಚಾಸಾ-3 ಮೀನಾಕ್ಷಿ ಇವರೊಂದಿಗೆ ಮದುವೆ ಆಗಿ ನಮ್ಮ ಮನೆಗೆ ಹೊಂದಿಕೊಂಡು ಇರುವ ಮನೆಯಲ್ಲಿ ವಾಸವಾಗಿದ್ದರು. ನಾನು, ನನ್ನ ಹೆಂಡತಿ ಮತ್ತು ಆರೋಪಿ ಉತ್ತಪ್ಪ ಮತ್ತು ಚಾಸಾ-2 ಸೋಮಣ್ಣ ಒಂದು ಮನೆಯಲ್ಲಿ ವಾಸವಾಗಿದ್ದೆವು. ನನ್ನ ಮಗ ನಂದೀಶ್ ಈತನು ಸುಮಾರು ಒಂದು ವರ್ಷದ ಹಿಂದೆ ಸಂತೆಗೆ ಎಂದು ಭಾಗಮಂಡಲಕ್ಕೆ ಹೋಗಿದ್ದನು. ನಾನು ದಿನಾಲು ಸಂಜೆ 6 ಗಂಟೆಗೆ ಮಲಗುತ್ತೇನೆ, ಸಾಕ್ಷಿ ಪಿರ್ಯಾದಿ ಮೇಲಿರುವ ತನ್ನ ಸಹಿಯನ್ನು ಒಪ್ಪಿಕೊಂಡಿದ್ದು, ಪಿರ್ಯಾದಿಯನ್ನು **ನಿಪಿ-1** ಎಂದು

ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು. ಆರೋಪಿತನು ಮೃತ ನಂದೀಶ್ ಈತನಿಗೆ ಆಸ್ತಿ ವಿಚಾರದಲ್ಲಿ ಅವಾಚ್ಯವಾಗಿ ಬೈದು ಜೀವ ಬೆದರಿಕೆ ಹಾಕಿ, ಕತ್ತಿಯಿಂದ ಕಡಿದು ಘೋರ ಪ್ರಮಾಣದ ಗಾಯಪಡಿಸಿರುವುದಿಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಪಿರ್ಯಾದಿ ಕೊಟ್ಟಿರುವುದಿಲ್ಲ. ನನ್ನ ಮಗ ನಂದೀಶನಿಗೆ ಆರೋಪಿತನು ಹಲ್ಲೆ ಮಾಡಿದ ವಿಚಾರದಲ್ಲಿ ನಾನು ಪಿರ್ಯಾದಿ ಕೊಟ್ಟಿರುವುದಿಲ್ಲ ಹಾಗೂ ಪಿರ್ಯಾದಿಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಮೃತ ಪಟ್ಟ ನಂತರ ಕೊಲೆ ಆದ ಹಿನ್ನೆಲೆಯಲ್ಲಿ ಮರುಹೇಳಿಕೆ ಕೊಟ್ಟಿರುವುದಿಲ್ಲ. ಸಾಕ್ಷಿ ಮಹಜರ್ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು **ನಿಪಿ-2** ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಸಾಕ್ಷಿ ಪೊಟೋ ನೋಡಿ ಗುರುತಿಸಿದ್ದು, ಪೊಟೋಗಳನ್ನು **ನಿಪಿ-3** ರಿಂದ **ನಿಪಿ-7** ಎಂದು ಗುರುತಿಸಲಾಯಿತು. ಪೊಟೋ ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**<u>ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ</u>**

1. ಮೃತ ನಂದೀಶ ಹಾಗೂ ಆರೋಪಿ ಉತ್ತಪ್ಪ ಹಾಗೂ ನಮ್ಮ ನಡುವೆ ಆಸ್ತಿ ಪಾಲಿನ ವಿಚಾರದಲ್ಲಿ ಪ್ರತಿದಿನ ಗಲಾಟೆ ಆಗುತ್ತಿತ್ತು ಅದಕ್ಕೆ ಆರೋಪಿ ಮತ್ತು ನಂದೀಶರವರ ಮಧ್ಯೆ ವೈಮನಸ್ಸು ಎಂದು ಸೂಚಿಸುವುದು ಸರಿಯಲ್ಲ.

2. ದಿನಾಂಕ 25.11.2023 ರಂದು ಮೃತ ನಂದೀಶನು ಮನೆಗೆ ಬಂದು ಸಂಜೆ 7.30 ಗಂಟೆ ಸಮಯದಲ್ಲಿ ನನ್ನೊಂದಿಗೆ ಆಸ್ತಿ ಪಾಲಿನ ವಿಚಾರದಲ್ಲಿ ಜಗಳ ಮಾಡಿಕೊಂಡಿದ್ದನು ಎಂದು ಸೂಚಿಸುವುದು ಸರಿಯಲ್ಲ. ದಿನಾಂಕ 25.11.2023 ರಂದು ರಾತ್ರಿ 8.30 ಗಂಟೆಗೆ ಆರೋಪಿ ಉತ್ತಪ್ಪ ಮನೆಯ ಹೊರಗೆ ಬಂದು ನಂದೀಶನನ್ನು ಕರೆದು ನಿನಗೆ ಆಸ್ತಿಯಲ್ಲಿ ಪಾಲು ಬೇಕಾ ಎಂದು ಅವಾಚ್ಯವಾಗಿ ಬೋಳಿ ಮಗನೆ ಎಂದು ಬೈದು ನಿನಗೆ ಗತಿ ಕಾಣಿಸುತ್ತೇನೆ ಎಂದು ಕೊಲೆ ಮಾಡುವ ಉದ್ದೇಶದಿಂದ ಮನೆಯ ಒಳಗೆ ಹೋಗಿ ಕತ್ತಿಯನ್ನು ತಂದು ನಂದೀಶನ ತಲೆಗೆ ಕಡಿದು ತೀವ್ರ ಸ್ವರೂಪದ ಗಾಯ ಮಾಡಿ ಕತ್ತಿಯನ್ನು ಅಲ್ಲೇ ಬಿಸಾಡಿ, ಪುನಃ ಕೋವಿಯನ್ನು ತಂದು ನಂದೀಶನಿಗೆ ಹೊಡೆಯಲು ಬಂದಾಗ ನಾನು, ಮೀನಾಕ್ಷಿ ಮತ್ತು ಸೋಮಣ್ಣ ಸೇರಿ ಆರೋಪಿಯಿಂದ ಕೋವಿಯನ್ನು ಕಸಿದುಕೊಂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ನಿಪಿ-1 ರಂತೆ ಪಿರ್ಯಾದಿ ಸಲ್ಲಿಸಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

3. ದಿನಾಂಕ 27.11.2023 ರಂದು ಮಧ್ಯಾಹ್ನ 12.51 ಗಂಟೆಗೆ ನನ್ನ ಮಗ ನಂದೀಶನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟಿದನು ಎಂದು ಸೂಚಿಸುವುದು ಸರಿಯಲ್ಲ.

4. ದಿನಾಂಕ 27.11.2023 ರಂದು ಬೆಳಿಗ್ಗೆ 9.30 ಗಂಟೆಗೆ ನಮ್ಮ ಕೃತ್ಯ ನಡೆದ ಸ್ಥಳದಲ್ಲಿ ಪೊಲೀಸರು ಸ್ಥಳದ ಪಂಚನಾಮೆ ಮಾಡಿ ಪಂಚನಾಮೆ ಕಾಲಕ್ಕೆ ರಕ್ತದ ಕಲೆಗಳನ್ನು ಸಂಗ್ರಹಿಸಿದ್ದರು ಮತ್ತು ಒಡೆದು ಹೋದ ಕೋವಿ ಮತ್ತು ರಕ್ತ ಕಲೆ ಆದ ಬಟ್ಟೆಯನ್ನು ವಶಪಡಿಸಿಕೊಂಡರು ಎಂದು ಸೂಚಿಸುವುದು ಸರಿಯಲ್ಲ. ಆರೋಪಿ ಉತ್ತಪ್ಪ ಕತ್ತಿಯಿಂದ ಹಲ್ಲೆ ಮಾಡಿ ನಂದೀಶನಿಗೆ ತಲೆಗೆ ಕಡಿದರಿಂದ ನಂದೀಶನು ಮೃತ ಪಟ್ಟಿದ್ದಾನೆ ಎಂದು ಸೂಚಿಸುವುದು ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಮರುಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ "ನಾನು ಈ ಮೇಲಿನ ವಿಳಾಸದಲ್ಲಿ ................ ನೋಡಿದರೆ ಗುರುತಿಸುತ್ತೇನೆ” ಎಂದು ಹೇಳಿಕೆ

ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯನ್ನು **ನಿಪಿ-8** ಎಂದು ಗುರುತಿಸಲಾಯಿತು. ಆರೋಪಿತನು ನನ್ನ ಮಗನಾಗಿದ್ದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ. ಓ.ಎಸ್.ಸಿ ರವರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.